# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 20/2017**

**ದೋ.ಸಾ. :04 ಫ್ರಾ.ಸಾ. : 03**

| | | |
|---|---|---|
| ಸಾಕ್ಷಿಯ ಹೆಸರು | : | ಮಹಾದೇವಿ ರಮೇಶ ನಾಯಕ |
| ಗಂಡನ ಹೆಸರು | : | ರಮೇಶ ನಾಯಕ |
| ವಯಸ್ಸು | : | 63 ವರ್ಷ |
| ಕೆಲಸ | : | ಗೃಹಿಣಿ |
| ವಾಸ | : | ಬಾವಿಕೇರಿ, ತಾಃ ಅಂಕೋಲಾ |

**ದಿನಾಂಕಃ 18-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷಿಯ ವಿಚಾರಣೆಯನ್ನು ಇನ್ ಕ್ಯಾಮೆರಾದ ಮೂಲಕ ಪಡೆಯಲಾಯಿತು.**

**(ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ)**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-7 ನನ್ನ ಹಿರಿಯ ಮಗ, ಚಾಸಾ-1 ಆತನ ಹೆಂಡತಿ ಅಂದರೆ ನನಗೆ ಸೊಸೆಯಾಗಬೇಕು. ಚಾಸಾ-5 ನನ್ನ ಕಿರಿಯ ಮಗ, ಚಾಸಾ-6 ಆತನ ಹೆಂಡತಿ. ಚಾಸಾ-14 ನನ್ನ ಮೊಮ್ಮಗ. ಚಾಸಾ-5 ಮತ್ತು 7 ರವರು ಅಂಕೋಲಾದ ಬಾವಿಕೇರಿಯಲ್ಲಿ ಅಕ್ಕ-ಪಕ್ಕದ ಮನೆಗಳಲ್ಲಿ ವಾಸವಾಗಿರುತ್ತಾರೆ. ನಾನು ನನ್ನ ಕಿರಿಯ ಮಗನಾದ ಚಾಸಾ-5 ರವರ ಮನೆಯಲ್ಲಿ ವಾಸವಾಗಿರುತ್ತೇನೆ. ಆರೋಪಿ ಚಾಸಾ-7 ರವರ ಸ್ನೇಹಿತ. ನನ್ನ ಮಗನಾದ ಚಾಸಾ-7 ರವರು ಕಾರವಾರದ ಸೀ ಬರ್ಡನಲ್ಲಿ ಕೆಲಸ ಮಾಡುತ್ತಿದ್ದು, ಆತನು ರಾತ್ರಿ ಪಾಳಿಯ ಕೆಲಸಕ್ಕೆ ಹೋದಾಗ, ನಾನು ನನ್ನ ಸೊಸೆಯಾದ ಚಾಸಾ-1 ರವರೊಂದಿಗೆ ಚಾಸಾ-7 ರವರ ಮನೆಯಲ್ಲಿ ಮಲಗಿಕೊಳ್ಳುತ್ತಿದ್ದೆ. ಆರೋಪಿ ಚಾಸಾ-7 ರವರ ಸ್ನೇಹಿತನಾಗಿದ್ದರಿಂದ, ಆತ ಇದ್ದ ಸಮಯದಲ್ಲಿ ಆರೋಪಿ ಮನೆಗೆ ಬಂದು ಹೋಗುತ್ತಿದ್ದ. ದಿಃ 23-01-2017 ರಂದು ರಾತ್ರಿ 08-00 ಗಂಟೆಗೆ ಚಾಸಾ-1 ರವರು ರಾತ್ರಿ ಪಾಳಿಯ ಕೆಲಸಕ್ಕೆ ಹೋಗಿದ್ದು, ಆ ದಿನ ರಾತ್ರಿ ಊಟವಾದ ನಂತರ ನಾನು 11-00 ಗಂಟೆ ಸುಮಾರಿಗೆ ಚಾಸಾ-7 ರವರ ಮನೆಗೆ ಹೋಗಿ, ಮನೆಯ

ಮಧ್ಯದ ಹಾಲ್ ನಲ್ಲಿ ಮಲಗಿಕೊಂಡಿದ್ದೆ ಹಾಗೂ ಚಾಸಾ–1 ರವರು ಮನೆಯ ಬೆಡ್ ರೂಮ್ ನಲ್ಲಿ ಮೊಮ್ಮಗನೊಂದಿಗೆ ಮಲಗಿಕೊಂಡಿದ್ದಳು.

2. ಆ ದಿನ ಮಧ್ಯರಾತ್ರಿ 01–00 ಗಂಟೆ ಸಮಯದಲ್ಲಿ ಮನೆಯ ಹಿಂದಿನ ಬಾಗಿಲು ಬಡಿಯುತ್ತಿದ್ದನ್ನು ಕೇಳಿ, ನಾನು ಮತ್ತು ಚಾಸಾ–1 ರವರು ಎಚ್ಚರಗೊಂಡು, ಇಬ್ಬರೂ ಕೂಡಿ, ಮನೆಯ ಬಾಗಿಲು ತೆಗೆದು ನೋಡಿದಾಗ, ಬಾಗಿಲು ಬಡಿದ ವ್ಯಕ್ತಿ ನನ್ನ ಮಗ ಚಾಸಾ–7 ರವರ ಸ್ನೇಹಿತನಾದ ನಾರಾಯಣ ರಾಮಚಂದ್ರ ನಾಯಕನಾಗಿದ್ದು, ಆತನಿಗೆ ಚಾಸಾ–1 ರವರು "ನೀನು ಇಷ್ಟು ರಾತ್ರಿಯಲ್ಲಿ ಏಕೆ ನಮ್ಮ ಮನೆಗೆ ಬಂದೆ" ಎಂದು ಕೇಳಿದಾಗ, ಆರೋಪಿ ಒಮ್ಮೆಲೆ ಮನೆಯ ಒಳಗೆ ನುಗ್ಗಿ ಬಂದು, ಚಾಸಾ–1 ರವರನ್ನು ಅಪ್ಪಿಕೊಂಡು, ರೂಮಿನ ಒಳಗೆ ಎಳೆದುಕೊಂಡ ಹೋಗಿ, ರೂಮಿನ ಬಾಗಿಲನ್ನು ಹಾಕಿಕೊಂಡನು, ಆಗ ಬೆಡ್ ರೂಮಿನ ಒಳಗೆ ಇದ್ದ ಚಾಸಾ–1 ಮತ್ತು ಚಾಸಾ–14 ಇಬ್ಬರೂ ಜೋರಾಗಿ ಕೂಗಿಕೊಳ್ಳುತಿದ್ದರು ಹಾಗೂ ನಾನು ಸಹ ಜೋರಾಗಿ ಕೂಗಿಕೊಂಡು, ಮನೆಯ ಹೊರಗೆ ಬಂದಾಗ, ಚಾಸಾ–1 ರವರು ಆರೋಪಿಯಿಂದ ತಪ್ಪಿಸಿಕೊಂಡು ಬೆಡ್ ರೂಮಿನಿಂದ ಹೊರಬಂದು, ಮನೆಯ ಹಿಂದಿನ ಬಾಗಿಲನ್ನು ಹಾಕಿಕೊಂಡು, ಓಡುತ್ತಿದ್ದಾಗ, ಆರೋಪಿಯು ಚಾಸಾ–1 ರವರನ್ನು ಹಿಡಿಯಲು ಹಿಂದಿನಿಂದ ಓಡಿ ಬಂದು, ಚಾಸಾ–1 ರವರು ಬಾಗಿಲು ಹಾಕಿಕೊಳ್ಳದಂತೆ ಹಿಡಿದುಕೊಂಡಿದ್ದು, ಆ ಸಮಯದಲ್ಲಿ ಮನೆಯ ಹಿಂದಿನ ಬಾಗಿಲು ಆರೋಪಿಯ ತಲೆಗೆ ತಾಗಿ, ರಕ್ತ ಬಂದಿತ್ತು, ತಕ್ಷಣ ಚಾಸಾ–1 ರವರು ಆರೋಪಿಯಿಂದ ತಪ್ಪಿಸಿಕೊಂಡು, ಆತನಿಗೆ ಒಳಗೆ ದೂಡಿ, ಮನೆಯ ಹಿಂದಿನ ಬಾಗಿಲನ್ನು ಹಾಕಿಕೊಂಡಳು ಹಾಗೂ ನಾನು ಮನೆಯ ಮುಂದಿನ ಬಾಗಿಲನ್ನು ಹಾಕಿಕೊಂಡೆನು, ನಮ್ಮೊಂದಿಗೆ ಚಾಸಾ–14 ರವರು ಸಹ ಕೂಗಿಕೊಳ್ಳುತ್ತಾ ಓಡಿ ಬಂದ. ನಾವು ಕೂಗಾಡುವ ಶಬ್ದ ಕೇಳಿ ಚಾಸಾ–5, 6 ಮತ್ತು ಕೇರಿಯ ಜನರು ಬಂದರು, ಆಗ ನಾವು ಅವರಿಗೆ ವಿಷಯ ತಿಳಿಸಿದಾಗ, ಎಲ್ಲರೂ ಸೇರಿ ಮನೆಯ ಒಳಗೆ ಕೂಡಿ ಹಾಕಿದ್ದ, ಆರೋಪಿಯನ್ನು ಹಿಡಿದು ಹೊರಗೆ ಕರೆದುಕೊಂಡು ಬಂದರು.

3. ಆ ನಂತರ ನಾನು ಚಾಸಾ–1 ರವರನ್ನು ಕೇಳಿದಾಗ ಆಕೆ "ಮನೆಯ ಒಳಗೆ ಬಂದಿದ್ದ ಆರೋಪಿಯು ನನ್ನನ್ನು ಬೆಡ್ ರೂಮಿನ ಒಳಗೆ ಎಳೆದುಕೊಂಡು ಹೋದವನು, ನೀನು ನನಗೆ ಬೇಕೆ ಬೇಕು, ನೀನಾಗೆ ಒಪ್ಪಿದರೆ ಸರಿ, ಇಲ್ಲದಿದ್ದರೆ ನಾನು ನಿನ್ನನ್ನು ಬಲತ್ಕಾರಿಸಿಯಾದರೂ ಪಡೆಯದೆ ಬಿಡುವುದಿಲ್ಲ, ಅಂತ ಹೇಳಿ, ನಾನು ಹಾಕಿಕೊಂಡಿದ್ದ ಚೂಡಿದಾರವನ್ನು ಎಳೆಯಲು ಪ್ರಯತ್ನಿಸಿದ ಹಾಗೂ ಚೂಡಿದಾರದ ಒಳಗೆ ಕೈ ಹಾಕಿ, ನಾನು ಹಾಕಿದ ಚಡ್ಡಿಯನ್ನು ಎಳೆಯಲು

ನೋಡಿದನು, ಆಗ ನಾನು ಬೊಬ್ಬೆ ಹಾಕಿಕೊಂಡು, ಆತನಿಂದ ತಪ್ಪಿಸಿಕೊಂಡು ಹೊರಗೆ ಓಡಿ ಬಂದಿರುತ್ತೇನೆ" ಎಂದು ಚಾಸಾ-1 ರವರು ತಿಳಿಸಿದರು. ನಂತರ ಬೆಳಿಗ್ಗೆ ಚಾಸಾ-7 ರವರು ಕೆಲಸದಿಂದ ಬಂದ ನಂತರ ನಾವು ಆತನಿಗೆ ವಿಷಯ ತಿಳಿಸಿ, ಚಾಸಾ-1 ರವರ ಮೂಲಕ ಆರೋಪಿತನ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇವೆ. ನಾನು ಈ ವಿಷಯದ ಬಗ್ಗೆ ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

4. ದಿಃ 25-01-2017 ರಂದು ಪೋಲಿಸರು ಚಾಸಾ-7 ರವರ ಮನೆಗೆ ಪಂಚನಾಮೆಗಾಗಿ ಬಂದಾಗ ನಾನು ಹಾಜರಿದ್ದು, ಪಂಚನಾಮೆಯ ಕಾಲಕ್ಕೆ ನಾನು, ಆರೋಪಿ ಚಾಸಾ-7 ರವರ ಮನೆಯನ್ನು ಅಕ್ರಮ ಪ್ರವೇಶ ಮಾಡಿ, ಚಾಸಾ-1 ರವರ ಜೊತೆ ಲೈಂಗಿಕ ಬಲತ್ಕಾರ ಮಾಡಲು ಪ್ರಯತ್ನಪಟ್ಟ ಸಮಯದಲ್ಲಿ ಆತನ ಮೊಬೈಲ್ ನ್ನು ಚಾಸಾ-7 ರವರ ಮನೆಯ ಬೆಡ್ ರೂಮ್ ನಲ್ಲಿ ಬಿಟ್ಟು ಹೋಗಿರುವುದನ್ನು ನಾನು ತೋರಿಸಿದ್ದು, ಪೋಲಿಸರು ಅದನ್ನು ನನ್ನ ಸಮಕ್ಷಮ ಸದರಿ ಮೊಬೈಲ್ ನ್ನು ಜಪ್ತುಪಡಿಸಿಕೊಂಡರು ಹಾಗೂ ಪೋಟೋಗಳನ್ನು ತಗೆದಿರುತ್ತಾರೆ. ಸಾಕ್ಷಿಯು ತಾನು ಹಾಜರುಪಡಿಸಿದ ಮೊಬೈಲ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-1 ಎಂದು ಗುರುತಿಸಲಾಗಿರುತ್ತದೆ. ನಿಪಿ-8 ರಲ್ಲಿ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು. ಜಪ್ತು ಪಂಚನಾಮೆಯ ಕಾಲಕ್ಕೆ ತೆಗೆದ ನಿಪಿ-9 ರಿಂದ ನಿಪಿ-11 ಪೋಟೋಗಳಲ್ಲಿ ತಾನು ಇರುವುದಾಗಿ ನೋಡಿ ಗುರುತಿಸಿರುತ್ತಾರೆ. ಪೋಲಿಸರು ಜಪ್ತು ಜಪ್ತುಪಡಿಸಿಕೊಂಡ ಮೊಬೈಲ್ ವಿವೋ ಕಂಪನಿಯದ್ದಾಗಿರುತ್ತದೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ